**ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ,**
**ಪಾಂಡವಪುರ**

**ಸಿಸಿ.ನಂ. 258/2024**

| | | | |
|---|---|---|---|
| **ಸಾಕ್ಷಿದಾರರು** | : | **ನವೀನ** | **ಸಿ.ಡಬ್ಲ್ಯೂ : 8** |
| **ತಂದೆ ಹೆಸರು** | : | **ಮಂಟಪ್ಪ** | **ಪಿ.ಡಬ್ಲ್ಯೂ : 5** |
| **ವಯಸ್ಸು** | : | **39 ವರ್ಷ** | |
| **ವೃತ್ತಿ** | : | **ಪೈಂಟ್ ಕೆಲಸ** | |
| **ವಾಸ ಸ್ಥಳ** | : | **ಜಯಂತಿ ನಗರ, ಪಾಂಡವಪುರ** | |

**ಸಾಕ್ಷಿಯನ್ನು ದಿಃ 21.05.2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದಃ**

1. ದಿಃ 27.07.2024 ರಲ್ಲಿರುವ ಪಂಚನಾಮೆ ಮತ್ತು ನೊಟೀಸ್ ನಲ್ಲಿರುವ ಸಹಿಗಳನ್ನು ಸಾಕ್ಷಿ ನೋಡಿ ತನ್ನದು ಎಂದು ಗುರುಸಿತಿಸಿಕೊಂಡಿರುದರಿಂದ ಪಂಚನಾಮೆಯನ್ನು ನಿಪಿ.7 ಎಂದು ಸಾಕ್ಷಿಯ ಸಹಿಯನ್ನು ನಿಪಿ.7 ಎ ಎಂದು, ನೋಟೀಸನ್ನು ನಿಪಿ.8 ಎಂದು, ಸಾಕ್ಷಿಯ ಸಹಿಯನ್ನು ನಿಪಿ.8 ಎ ಎಂದು ಗುರುತಿಸಲಾಯಿತು. ದಿಃ 27.07.2024 ರಂದು ನಾನು ನನ್ನ ಸ್ನೇಹಿತ ಬೈಕಿನಲ್ಲಿ ಎಸ್ ಎಲ್ ವಿ ಚತ್ರದ ಬಳಿ ಹೋಗುತ್ತಿರುವಾಗ ಪೊಲೀಸರು ನಮ್ಮನ್ನು ನಿಲ್ಲಿಸಿ ಕರೆದರು. ರಾಜೇಶ ಮತ್ತು ರವಿಕುಮಾರ್ ರವರ ನಡುವೆ ದಿಃ 21.07.2024 ರಂದು ಗಲಾಟೆಯಾಗಿತ್ತು, ಆ ವಿಚಾರವಾಗಿ ಸ್ಥಳ ಪಂಚನಾಮೆ ಮಾಡಲು ಸಹಕರಿಸಿ ಎಂದು ಕೇಳಿಕೊಂಡರು. ನಾವುಗಳು ಒಪ್ಪಿ ಸಹಕರಿಸಿವು. ನಮ್ಮಗಳನ್ನು ನಿಲ್ಲಿಸಿ ಪೊಲೀಸರು ಫೋಟೋ ತೆಗೆದರು. ಚಾಸಾ.1, 7, ನಾನು ಪೊಲೀಸರು ಇದ್ದೆವು. 1.45 ರಿಂದ 2.30 ಗಂಟೆ ವರೆಗೆ ಮಹಜರು ಮಾಡಿದರು. ಸ್ಥಳ

*ಮಹಜರು ಮಾಡುವಾಗ ತೆಗೆದ ಫೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ.9 ಎಂದು ಗುರುತಿಸಲಾಯಿತು.*

***<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ</u>***

*2. ಚಾಸಾ.1 ಮತ್ತು ನೀವು ಒಂದೇ ಊರಿನವರು ಹಾಗೂ ಸ್ನೇಹಿತರು ಎಂದರೆ ಸರಿ. ನಾನು ಪೈಂಟ್ ಕೆಲಸ ಮಾಡುತ್ತೇನೆ. ಆ ದಿನ ನಾನು ಮತ್ತು ನನ್ನ ಸ್ನೇಹಿತ ವೈನ್ ಸ್ಟೋರಿಗೆ ಬೈಕಿನಲ್ಲಿ ಹೋಗುತ್ತಿದ್ದೆವು. ನಿಪಿ.7ರ ಸಂಗತಿಗಳು ನಿಮಗೆ ಖುದ್ದು ಗೊತ್ತಿಲ್ಲ ಎಂದರೆ ಸರಿ. ಸಾಕ್ಷಿ ಜ್ಞಾಪಕ ಇಲ್ಲವೆಂದು ಹೇಳುತ್ತಾರೆ. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲಾ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ. ಚಾಸಾ.1, 7, ನೀವುಗಳು ಪರಸ್ಪರ ಸ್ನೇಹಿತರಾಗಿರುವುದರಿಂದ ಷಾಮೀಲಾಗಿ ಪ್ರಕರಣಕ್ಕಾಗಿ ನಿಪಿ.7 ರಿಂದ 9 ನ್ನು ದಾಖಲೆಗಳನ್ನು ಸೃಷ್ಟಿಸಿರುತ್ತೀರಾ ಎಂದರೆ ಸರಿಯಲ್ಲ. ನಿಮಗೂ ಆರೋಪಿಗೂ ವೈಷಮ್ಯ ಇದೆ ಎಂದರೆ ಸರಿಯಲ್ಲ. ನಿಮಗೂ ಮತ್ತು ಆರೋಪಿಗೂ ವೈಷಮ್ಯ ಇರುವುದರಿಂದ ಅವರ ವಿರುದ್ಧ ಸುಳ್ಳು ಸಾಕ್ಷಿ ಕೊಡುತ್ತಿದ್ದೀರಾ ಎಂದರೆ ಸರಿಯಲ್ಲ.*

***<u>ಮರು ವಿಚಾರಣೆ ಇಲ್ಲ.</u>***

***(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿದೆ).***

***ಸಾ.ಓ.ಹೇ.ಕೆ.ಸ.ಇ.***

***ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು***
***ಜೆ.ಎಂ.ಎಫ್.ಸಿ., ಪಾಂಡವಪುರ.***